SRI VEERENDRA PATIL;—We have not yet taken up this project; investigation is going on. The anxiety of our Chief Engineers is to see that maximum utilisation of water is ensured. That is why they have been increasing the scope of the project. When the project report is completed, we shall send it as per the procedure to the Government of India for technical clearance, and when technical clearance is received, we shall think of taking up this project.

ಶ್ರೀ ಎನ್. ಎ. ಚನ್ನೇಗೌಡ;—ಯಾವಾಗ ಅಂತಿಮವಾಗಿ ಇದು ಆಗುತ್ತಿದೆ? ಮತ್ತು ಇದನ್ನು ಮುಂದಿನ ಬಡ್ಜೆಟ್ಟಿನಲ್ಲಿ ಸೇರಿಸುವ ಕಾರ್ಯಕ್ರಮ ಏನಾದರೂ ಇದೆಯೇ?

ಶ್ರೀ ವೀರೇಂದ್ರ ಪಾಟೀಲ್:—ನಾನು ಆಗಲೇ ಹೇಳಿದೆ. ಇದು ಮುಗಿಯುವುದಕ್ಕೆ ಸ್ವಲ್ಪ ಟೈಮ್ ಆಗಬಹುದು. ಪ್ರಾಜೆಕ್ಟ್ ರಿಪೋರ್ಟ್ ಆಗುವವರೆಗೂ ಮಂಜೂರಾತಿ ಕೊಡುವುದು ಕಷ್ಟ. ಪ್ರಾಜೆಕ್ಟ್ ರಿಪೋರ್ಟ್ ಆದಮ್ಮ ಜಾಗ್ರತೆ ಕೇಂದ್ರ ಸರ್ಕಾರಕ್ಕೆ ಕಳುಹಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಬಿ ಪಿ. ಗಂಗಾಧರ್.—ಈಗ ಸುಮಾರು ೧೫ ವರ್ಷ ಆಗಿದೆ. ಈ ಒಂದು ಪ್ರಾಜೆಕ್ಟ್ ಕಟ್ಟಬೇಕಾದರೆ ೧೫ ವರ್ಷವಾದರೆ, shall I imagine that you are incapable of doing this work?

ಶ್ರೀ ವೀರೇಂದ್ರ ಪಾಟೀಲ್:—ನಮ್ಮ ಇನ್ ಕೇಪಬಲಿಟಿ ಪ್ರಶ್ನೆ ಇದರಲ್ಲಿ ಬರುವುದಿಲ್ಲ. ಈಗಾಗಲೇ ಅನೇಕ ಪ್ರಾಜೆಕ್ಟ್‌ಗಳ ಕೆಲಸ ಕಾರ್ಯಗಳನ್ನು ಪ್ರಾರಂಭ ಮಾಡಿದ್ದೇವೆ. ಮಾನ್ಯ ಸದಸ್ಯರಿಗೆ ಗೊತ್ತಿದೆ ನೀರಾವರಿ ಸಲುವಾಗಿ ಬಹಳ ಹಣದ ಅವಶ್ಯಕತೆ ಇದೆ, ನಮಗೆ ಎಷ್ಟು ಹಣ ಬೇಕಾಗುತ್ತದೆ ಅಷನ್ನು ಒದಗಿಸಿಕೊಳ್ಳುವುದಕ್ಕೆ ಇಲ್ಲಿಯವರೆಗೂ ಸಮರ್ಥರಾಗಿಲ್ಲ, ಹಣದ ಮಂಗಟ್ಟಿನ ಪ್ರಶ್ನೆ ಬಗೆಹರಿಸಬೇಕಾಗುತ್ತದೆ ಮತ್ತು ಟೆಕ್ನಿಕಲ್ ಆಗಿ ಎಸ್ಟಿಮೇಟ್ ಮುಂತಾದ್ದು ಆಗಬೇಕಾಗುತ್ತದೆ. ಈ ಎಲ್ಲ ಪ್ರೊಸೀಜರ್ ಕಂಪ್ಲೀಟ್ ಮಾಡಬೇಕಾಗುತ್ತದೆ. ಮಾಡಿದ ಮೇಲೆ ಮುಂದಿನ ಕಾರ್ಯ ಮಾಡಬೇಕಾಗುತ್ತದೆ.

ಶ್ರೀ ಎಚ್. ಪುಟ್ಟದಾಸ್ —ನಾನು ತಿಳಿದಿರುವ ಪ್ರಕಾರ ೧೯೫೫ನೇ ಇಸವಿಯ ಬಡ್ಜೆಟ್‌ನಲ್ಲಿ ಇದನ್ನು ಸೇರಿಸಲಾಗಿತ್ತು, ಕೆಲವು ಕಾರಣಗಳಿಂದ ಕೈಬಿಡಲಾಗಿದೆ ಎಂದು ಗೊತ್ತಾಗಿದೆ, ಇದು ನಿಜವೇ?

ಶ್ರೀ ವೀರೇಂದ್ರ ಪಾಟೀಲ್.—೧೯೫೫ನೇ ಇಸವಿಯಲ್ಲಿ ಯಾವ ಕಾರಣದಿಂದ ಇದು ನಿಂತು ಹೋಯಿತು ಅಂತ ಅನ್ನುವಂತಹದನ್ನು ಇವತ್ತು ನಾನು ಹೇಳುವುದಕ್ಕೆ ಕಷ್ಟವಾಗುತ್ತದೆ. ಅದು ರಾಜ್ಯ ಪುನರ್‌ವಿಂಗಡಣೆ ಆಗುವುದಕ್ಕಿಂತ ಮುಂಚಿನ ಕಾಲ ಆಗುತ್ತದೆ. ಕೈ ಬಿಡಬೇಕೆಂಬ ವಿಚಾರ ಇದ್ದಿದ್ದರೆ ಇಲ್ಲಿಯವರೆಗೂ ಇಷ್ಟೊಂದು ಸಾರಿ ಎಸ್ಟಿಮೇಟ್ ಮಾಡಿಸುವುದಕ್ಕೆ ಹೋಗುತ್ತಲೇ ಇರಲಿಲ್ಲ ಈ ಪ್ರಾಜೆಕ್ಟ್ ಕೈ ಬಿಡಬೇಕೆಂಬ ವಿಚಾರ ಸರ್ಕಾರದವರಿಗೆ ಇಲ್ಲ.

UNAUTHORISED OCCUPATION OF GOVERNMENT LANDS

250. SRI A. R. BADARI NARAYAN (Shimoga) :—

Will the Minister for Revenue please refer to the answers given to the starerd question No. 508 (11th list) during the VI Session 69 on last September 69 and state:—

(a) whether as stated in answer to clause (b) of the Starred Question No. 508 referred above, directions have been issued to avoid procedural delays ;

(SRI A. R. BADARI NARAYAN)

(*b*) whether the land giant rules have been modified for expediting disposal of land grant applications;

(*c*) whether owers local Officers have been enhanced ?

SRI H. V. KOUJALGI (Minister for Revenue):—

(*a*) Yes.

(*b*) Yes.

(*c*) Yes.

SRI A. R. BADARI NARAYANA:—It is stated in the answer that directions have been issued to avoid procedural delays and that rules have been modified and that the local officer's powers have been enhanced. May I know what are the various modifications made, directions given and the powers conferred on the Tahsildars?

SRI H. V. KOUJALGI:— Sir, in order to void delay, local Consultative committees have been formed and they have been requested to dispose of all lands within four months. The local officers have been particularly instructed to prepare details about the land available for allotment, and they have been given more powers; *i.e.*, prior to 1969 the Tahsildars had powers upto Rs. 2,000/- valuation of the land, he Assistant Commissioners upto Rs. 3,000/-and so on; instead of that they have now been empowered to distribute lands on hectare basis or acreage basis.

SRI A. R. BADARI NARAYAN:— In regard to distribution of lands only the revenue lands are mentioned. What about the various other lands, small tank beds, gomals and gram thanas which have been unauthorisedly occupied for over 10 years by many landlesspeople?

SRI H. V. KOUJALGI :— These Committees and the Revenue Officers are empowered to distribute only the Revenue lands. So far as the firest lands are concerned, if they are not useful to the Forest Department and if the Forest Department agrees to give them for distribution, then only these lands caen be distributed. So far as the tank beds are oncerned, if the P. W. D. agrees to give them to the Revenue Department for distribution, such lands can be distributed. The gomals also can bedis ributed if there is excess gomal land ana if the Panchayat concerned agrees to do so. All these lands will be distributed according to the land grant rules. So far as the unauthorised occupations are concerned, the hon Member knows that section 94 of the Land Revenue Act is amended and the Deputy Commissioners are specially empowered to distribute them.

ಶ್ರೀ ಎಸ್. ಎಂ. ಗುರೆಡ್ಡಿ :—ಈಗಾಗಲೇ ಕೆಲವು ತಿಂಗಳ ಹಿಂದೆ ಪಿ. ಎಸ್. ಪಿ. ಎಸ್. ಎಸ್. ಪಿ. ಅವರು ಮತ್ತು ಕಮ್ಯುನಿಷ್ಟರು ಲ್ಯಾಂಡ್ ಗ್ರಾಬ್ ಮೂವಮೆಂಟ್‌ನಲ್ಲಿ ಕೆಲವು ಜಮೀನುಗಳನ್ನು ಆಕ್ರಮಿಸಿ ಕೊಂಡಿದ್ದಾರೆ. ಅಂಥಾ ಭೂಮಿಯನ್ನು ತಾವೇ ವಹಿಸಿಕೊಳ್ಳುತ್ತೀರಾ ಅಥವಾ ಅವರಿಗೆ ಪಟ್ಟಾಮಾಡಿ ಕೊಡುತ್ತೀರಾ?

ಶ್ರೀ ಎಚ್. ವಿ. ಕೌಜಲಗಿ :—ಲ್ಯಾಂಡ್‌ಗ್ರಾಂಟ್ ರೂಲ್ಸಿನ ೪ನೇ ಕಲಂನಲ್ಲಿ ಈ ಬಗ್ಗೆ ಯಾವರೀತಿ ಮಾಡಬೇಕೆಂಬದನ್ನು ನಾವು ಹೇಳಿದ್ದೇವೆ. ೧ನೇ ಜೂಲೈ ೧೯೬೮ರ ಪೂರ್ವದಲ್ಲಿ ಯಾರು ಯಾರು ಅನ್‌ಆಥರೈಜ್ಡ್ ಕಲ್ಟಿವೇಷನ್ ಮಾಡಿದ್ದರೋ ಆವರ ಬಗೆ, ಮಾತ್ರ ಅರ್ಹಪ್ರಕರಣಗಳಬಗ್ಗೆ ವಿಚಾರಮಾಡ ಲಾಗುತ್ತದೆ. ಆ ತಾರೀಖಿನಿಂದ ಈಚೆಗೆ ಯಾರು ಅನಧಿಕೃತವಾಗಿ ಕಲ್ಟಿವೇಷನ್ ಮಾಡುತ್ತಿದ್ದಾರೆಯೋ ಅಂತವರನ್ನು ಹೊರಗೆ ಹಾಕಬೇಕಾಗುತ್ತದೆ.

ಶ್ರೀ ಹಂಜಿಶಿವಣ್ಣ:—ಸ್ವಾಮಿ ಭೂಮಿಯನ್ನು ಹಂಚುವುದಕ್ಕೆ ತಾಲ್ಲೂಕ್ ಲೆವೆಲ್‌ನಲ್ಲಿ ಒಂದು ಕಮಿಟಿಯನ್ನು ತಾವು ನೇಮಕ ಮಾಡಿದ್ದೀರಿ ಆದರೆ ಈಗ ೧೦ ವರ್ಷಗಳಿಂದ ರೆಕಾರ್ಡ್ ಹಾಗೆಯೇ ಬಿದ್ದಿವೆ; ಅವುಗಳನ್ನು ಜಾಗ್ರತೆಯಾಗಿ ವಿಲೇವಾರಿ ಮಾಡುತ್ತೀರಾ, ಮತ್ತು ತಾಲ್ಲೂಕ್ ಆಫೀಸುಗಳಲ್ಲಿ ಎಷ್ಟು ಅರ್ಜಿಗಳು ಪೆಂಡಿಗ ಇವೆ ಅವುಗಳನ್ನೆಲ್ಲಾ ತರಿಸಿಕೊಂಡು ವಿಲೇವಾರಿ ಮಾಡುವುದಕ್ಕೆ ಜಿಲ್ಲಾಧಿಕಾರಿಗಳಿಗೆ ಆದೇಶಕೊಟ್ಟು ಈಗ ಸರ್ಕಾರಿ ಜಮೀನನ್ನು ಯಾರು ಅನಧಿಕೃತವಾಗಿ ಸಾಗುಮಾಡುತ್ತಿದ್ದಾರೆ ಅವರುಗಳನ್ನೆಲ್ಲಾ ಎವಿಕ್ಟ್ ಮಾಡಿಸಿ ಅವುಗಳ ಬಗ್ಗೆ ಏನು ಕ್ರಮವನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಂಡು ಆ ಜಮೀನನ್ನೂ ಜನಗಳಿಗೆ ಹಂಚ್ಚುವುದಕ್ಕೆ ವ್ಯವಸ್ಥೆಮಾಡುತ್ತೀರಾ?

ಶ್ರೀ ಎಚ್. ವಿ. ಕೌಜಲಗಿ :— ಆ ಅರ್ಜಿಗಳನ್ನು ತೀವ್ರವಾಗಿ ವಿಲೇವಾರಿ ಮಾಡಬೀಕು ಎಂಬ ಉದ್ದೇಶದಿಂದ ತಾಲ್ಲೂಕು ಮಟ್ಟದಲ್ಲಿ ಕಮಿಟಿಗಳನ್ನು ಮಾಡಿದೆ. ಆದ್ದರಿಂದ ಸಂಬಧಪಟ್ಟ ಅಧಿಕಾರಿಗಳು ಕಮಿಟಿಯ ಸದಸ್ಯರುಗಳು ಎಲ್ಲಾ ಅರ್ಜಿಗಳನ್ನು ತರಿಸಿಕೊಂಡು ಅವುಗಳನ್ನು ವಿಚಾರಮಾಡಬಹುದು.

ಶ್ರೀ ಎಚ್. ಬಿ. ಚ್ವಾಲನಯ್ಯ :— ಹಾಸನ ಜಿಲ್ಲೆಯಲ್ಲಿ ಅರಕಲಗೂಡು, ಮತ್ತು ಆಲೂರು ತಾಲ್ಲೂಕುಗಳಲ್ಲಿ ಹೇಮಾವತಿ ಪ್ರಾಜೆಕ್ಟು ಏರಿಯಾದಲ್ಲಿ ಮುಳುಗಡೆ ಯಾದ ಜಮೀನು ಮಾಲೀಕರುಗಳಿಗೆ ಜಮೀನನ್ನು ಒದಗಿಸುವುದಕೋಸ್ಕರ ರೀಹ್ಯಾಬಿಲಿಟೆಷನ್ ಕಮಿಟಿಯನ್ನು ನೇಮಕ ಮಾಡಿದ್ದೀರಿ. ಅವರು ಆ ತಾಲ್ಲೂಕುಗಳಲ್ಲಿ ಇರತಕ್ಕ ಜಮೀನನ್ನೂ ಹಂಚುವುದಕ್ಕೆ ವ್ಯವಸ್ಥೆ ಮಾಡಿದ್ದಾರೆ. ಹೀಗಿರುವಾಗ ಆ ತಾಲ್ಲೂಕುಗಳಲ್ಲಿ ತಾಲ್ಲೂಕು ಮಟ್ಟದ ಲ್ಯಾಂಡ್ ಗ್ರಾಬ್ ಕಮಿಟಿಯನ್ನು ನೇಮಕ ಮಾಡುವ ಅವಶ್ಯಕತೆ ಏನಿದೆ ಎಂದು ನಾನು ಸರ್ಕಾರಕ್ಕೆ ಒಂದು ಕಾಗದವನ್ನು ಬರೆದಿದ್ದೇನೆ. ಅದಕ್ಕೆ ಇನ್ನೂ ಸರ್ಕಾರದಿಂದ ಉತ್ತರ ಬಂದಿಲ್ಲ. ರಿಹ್ಯಾಬಿಲಿಟೇಷನ್ ಕಮಿಟಿಯವರು ಆಲ್ಲಿರತಕ್ಕ ಜಮೀನನ್ನೂ ಜಮೀನು ಅಯಿಗಡೆಯಾದವರಿಗೆ ಕೊಡಬೇಕೆಂದು ಮಾಡಿಕೊಡಿದ್ದಾರೆ. ಹೀಗಿರುವಾಗ ಆಲ್ಲಿ ತಮ್ಮ ಕಮಿಟಿಯಂ ಅವಶ್ಯಕತೆ ಇದೆಯೇ?

ಶ್ರೀ ಎಚ್.ವಿ. ಕೌಜಲಗಿ :—ಹಾಸನ ಜಿಲ್ಲೆಯಲ್ಲಿ ರೀಹ್ಯಾಬಿಲೇಟೀಷನ್ ಕಮಿಟಿಯವರು ಸುಮಾರು ೫೦ ಸಾವಿರ ಎಕರೆ ಭೂಮಿಯನ್ನು ರಿಜರ್ವೇಷನ್ ಮಾಡಿದ್ದಾರೆ. ಇದರಲ್ಲಿ ಭೂಮಿ ಮುಳುಗಡೆಯಾದ ವರಿಗೆ ಹಂಚುವುದಕ್ಕೆ ೧೫ ಸಾವಿರ ಎಕರೆ ರಿಜರ್ವೇಷನ್ ಮಾಡಿದರೆ ಸಾಕು ಎಂದು ಅಲ್ಲಿಯ ಸ್ಥಾನಿಕ ಅಧಿಕಾರಿಗಳು ತಿಳಿಸಿದ್ದಾರೆ. ಆದ್ದರಿಂದ ೧೫ ಸಾವಿರ ಎಕರೆ ಭೂಮಿಯನ್ನು ರಿಜರ್ವೇಷನ್ ಇಟ್ಟು ಬಾಕಿ ಜಮೀನನ್ನು ಭೂಹೀನ ಜನಗಳಿಗೆ ಹಂಚುವುದಕ್ಕೆ ತಾಲ್ಲೂಕ್ ಲೆವೆಲ್ ಕಮಿಟಿಯವರಿಗೆ ತಿಳಿಸುತ್ತೇವೆ.

SRI M.MALLAPPA:—Have you given any powers to the land Grant Committees in respect of confirming the unauthorised occupations and if so what is the time limit within which these will have to be confirmed to the bonafide occupants?

ಶ್ರೀ ಎಚ್.ವಿ. ಕೌಜಲಗಿ :— ತಾಲ್ಲೂಕು ಕಮಿಟಿಗಳಲ್ಲಿ ಈ ಬಗ್ಗೆ ತೀರ್ಮಾನ ತೆಗೆದುಕೊಂಡು ವರಸಲಹೆಯ ಪ್ರಕಾರ ಅಧಿಕಾರಿಗಳು ಜಮೀನನ್ನು ಕನ್‌ಫರ್ಮ್ ಮಾಡುತ್ತಾರೆ ಅದನ್ನು ಆದಷ್ಟು

(ಶ್ರೀ ಎಚ್. ವಿ. ಕೌಜಲಗಿ)

ಜಾಗ್ರತೆ ಕನ್‌ಫರ್ಮ್ ಮಾಡಬೇಕೆಂದು ನಾವು ತಿಳಿಸಿದ್ದೇವೆ. ಆದರೆ ಕೆಲವು ಸಂದರ್ಭದಲ್ಲಿ ಜಮೀನನ್ನು ಕನ್‌ಫರ್ಮ್ ಮಾಡತಕ್ಕ ಸಮಯದಲ್ಲಿ ಕೆಲವೊಂದು ಭಾಗವನ್ನು ಕಡಿಮೆ ಮಾಡತಕ್ಕ ಪ್ರಸಂಗ ಬರುತ್ತದೆ, ಮತ್ತು ಫಾರೆಸ್ಟ್ ಏರಿಯಾ ಆಗಿದ್ದರೆ ಟಿಂಬರ್ ವಗೈರೆಗಳನ್ನು ಕಡಿದು ಸಾಗಿಸುವಂತಹ ಪ್ರಸಂಗ ಬರುತ್ತದೆ ಈ ದೃಷ್ಟಿಯಿಂದ ಜಮೀನುಗಳನ್ನು ಕನ್‌ಫರ್ಮ ಮಾಡುವುದು ಸ್ವಲ್ಪ ಡಿಲೇ ಆಗಬಹುದು.

ಶ್ರೀ ಎಸ್. ಎಚ್. ಪುಟ್ಟರಾಂಗನಾಥ್ :— ಜಮೀನು ಇಲ್ಲದೇ ಇರುವವರಿಗೆ ಗೋಮಾಳದ ಜಮೀನನ್ನು ಕೊಡತಕ್ಕ ವ್ಯವಸ್ಥೆ ಮಾಡುವುದಕ್ಕೆ ಸಾಧ್ಯವಿದೆಯೇ? ಮತ್ತು ಮಲೆನಾಡಿನಲ್ಲಿ ಕೆಲವು ಭಾಗದಲ್ಲಿ ಹಿಂದರೆ ಸಕಲೇಶಪುರ ಬೇಲೂರು ಈ ಪ್ರದೇಶದಲ್ಲಿ ಸರ್ಕಾರದವರು ನೇಮಿಸಿರತಕ್ಕ ಕಮಿಟಿಗಳವರು ಕಾಫಿ ಲ್ಯಾಂಡನ್ನು ಕೊಡುವುದಕ್ಕೆ ಬರುವುದಿಲ್ಲ ಎಂದು ಸರ್ಕಾರದವರು ಏನು ಆರ್ಡರ್‌ಇಷ್ಯೂ ಮಾಡಿದ್ದಾರೆ ಅದನ್ನು ವಾಪಸ್ಸು ತೆಗೆದು ಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರಾ .

ಶ್ರೀ ಎಚ್.ವಿ.ಕೌಜಲಗಿ :—: ಗೋಮಾಳದ ಬಗ್ಗೆ ಪ್ರತಿಯೊಂದು ಊರಿನಲ್ಲಿಯೂ ಇಷ್ಟಷ್ಟು ಜಾನುವಾರುಗಳು ಇದ್ದರೆ ಇಂತಿಷ್ಟು ಗೋಮಾಳ ಇರಬೇಕು ಎಂದು ಒಂದುನಿಯಮ ಇದೆ. ಅದರ ಪ್ರಕಾರ ಗೋಮಾಳವನ್ನು ರಿಜರ್ವ್ ಮಾಡಬೇಕಾಗುತ್ತದೆ. ಆದರೆ ಪ್ರತಿಯೊಬ್ಬ ಬಡವರಿಗೂ ಜಮೀನು ಹಂಚಬೇಕು ಎಂದರೆ ಅದು ಸಾಧ್ಯವಿಲ್ಲ. ಎಷ್ಟು ಭೂಮಿ ಕೊಡುವುದಕ್ಕೆ ಅವೈಲಬಲ್ ಆಗಿರುತ್ತದೆಯೋ ಅದನ್ನು ಜನ ಗಳಿಗೆ ಹಂಚುತ್ತೇವೆ. ಕಾಫಿ ಲ್ಯಾಂಡ್ ಹಂಚುವ ಬಗ್ಗೆ ಅದಕ್ಕೆ ಸಂಬಂಧಪಟ್ಟ ಕಮಿಟಿಯವರು ಇನ್ನೂ ಮೀಟಿಂಗ್ ಮಾಡಿಲ್ಲ. ಮಲೆನಾಡಿನಲ್ಲಿ ಜಮೀನನ್ನು ಹಂಚಿಕೆಮಾಡಬೇಕೆಂಬ ಬಗ್ಗೆ ಬೇಡಿಕೆಗಳು ಬಂದಿವೆ ಇದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳ ಒಂದು ಮೀಟಿಂಗ್ ಕರೆದಿದ್ದೇವೆ ಅಮೀಟಿಂಗ್‌ನಲ್ಲಿ ಏನು ಡಿಸಿಷನ್ ತೆಗೆದುಕೊಳ್ಳುತ್ತಾರೆಯೋ ಅದರಂತೆ ಮಾಡುತ್ತೇವೆ.

ಶ್ರೀ. ವಿ.ಎಲ್.ಶಿವಪ್ಪ:—ಈಗತಾನೆ ಮಾನ್ಯ ಮಂತ್ರಿಗಳು ಹೇಳಿದರು, ೧೦ ಜುಲೈ ೬೮ ನೇ ಇಸವಿಗೆ ಹಿಂದೆ ಯಾರು ಯಾರು ಅನ್‌ಅಥರೈಜ್ಡ್ ಕಲ್ಟಿವೇಷನ್ ಮಾಡಿದ್ದರು ಮತ್ತು ಎನ್‌ಕ್ರೋಚ್‌ಮೆಂಟ್ ಮಾಡಿದ್ದಾರೆ ಅಂಥವರಿಗೆ ಆ ಜಮೀನನ್ನು ಮಂಜೂರು ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತೇವೆ ಉಳಿದವರನ್ನು ಎವಿಕ್ಟ್ ಮಾಡಿಸುತ್ತೇವೆ ಎಂದು. ಈಗ ಒಂದು ವೇಳೆ ಕೆಲವರು ಹತ್ತಾರು, ವರ್ಷಗಳಿಂದ ಅನ್ ಅಥರೈಜ್ಡ ಕಲ್ಟಿವೇಷನ್ ಮಾಡುತ್ತಾ ಮತ್ತು ತಮ್ಮ ಜಮೀನಿಗೆ ಆಡ್‌ಜಾಯಿನಿಂಗ್ ಆಗಿರತಕ್ಕ ೧೦ ಗುಂಟೆ, ೨೦ ಗುಂಟೆ ಜಮೀನನ್ನು ಎನ್‌ಕ್ರೋಚ್‌ಮೆಂಟ್ ಮಾಡಿದ್ದರೆ ಅಂಥವನ್ನು ಅವರಿಗೆ ಕೊಡದಿದ್ದರೆ ಅವರ ಗತಿ ಏನು? ಇಂಥಾದ್ದು ಯೋಗ್ಯ ರೀತಿಯಲ್ಲಿದ್ದರೆ ಅಂಥಾದ್ದನ್ನು ಅವರಿಗೇ ಕೊಡವುದಕ್ಕೆ ಅಧಿಕಾರಿಗಳಿಗೆ ತಿಳಿಸುವುದಕ್ಕೆ ಅವಕಾಶ ಇದೆಯೇ ?

ಶ್ರೀ ಎಚ್. ವಿ. ಕೌಜಲಗಿ :—ಒಳನೇ ಕಲಂನಿಗಳಿಗೆ ಕೆಲವು ತಿದ್ದುಪಡಿಗಳನ್ನು ಮಾಡಿದ್ದಾರೆ. ಆದರೊಳಗೆ ಮಾನ್ಯ ಸದಸ್ಯರು ಕೇಳುವ ಪ್ರಶ್ನೆಗಳಿಗೆಲ್ಲಾ ಉತ್ತರ ಬರುತ್ತದೆ.

ಶ್ರೀ ಎ.ಆರ್. ಬದರೀನಾರಾಯಣ :— ಈಗ ನಾನಾ-ರೀವಿನ್ಯೂ ಲ್ಯಾಂಡ್ಸ್ ಏನಿವೆಯೋ ಅವನ್ನು ಹತ್ತಾರು ವರ್ಷಗಳಿಂದ ಕಲ್ಟಿವೇಷನ್ ಮಾಡಿಕೊಂಡಿದ್ದಾರೆ. ವೆಕೇಷನ್ ಆಗದೇ ಇರತಕ್ಕ ಜಮೀನುಗಳನ್ನು ಫಾರೆಸ್ಟ್ ಡಿಪಾರ್ಟ್‌ಮೆಂಟಿನಿಂದ ರಿಲೀಜ್ ಆಗಬೇಕು. ಸಂಬಂಧಪಟ್ಟ ಇಂಜನಿಯರುಗಳು ಅದನ್ನು ಜಾಗ್ರತೆ ಯಾಗಿ ಡಿಸ್‌ಪೋಜ ಮಾಡುವ ಹಾಗತಕ್ಕ ಸೂಚನೆಗಳನ್ನು ಕೊಡುತ್ತೀರಾ? ಲ್ಯಾಂಡ್ ಡಿಸ್‌ಪೋಜಲ್ ಕಮಿಟಿಗೆ ಇಂತಹ ಕೇಸ್‌ಗಳನ್ನು ಶಿಫಾರಸುಮಾಡುವುದಕ್ಕೆ ಅಧಿಕಾರ ಕೊಡುತ್ತೀರಾ?

ಶ್ರೀ ಎಚ್.ವಿ. ಕೌಜಲಗಿ :— ಕನ್‌ಸಲ್ಟೇಟಿವ್ ಕಮಿಟಿಗೆ ಅವರು ಶಿಫಾರಸುಮಾಡುವುದಕ್ಕೆ ಪೂರಾ ಅಧಿಕಾರವಿದೆ. ಅವರು ಸಲಹೆಗಳನ್ನು ಕೊಡಬಹುದು. ಅವು ಯೋಗ್ಯವಾಗಿದ್ದರೆ ಸರ್ಕಾರ ಅದನ್ನು ಮಾನ್ಯ ಮಾಡುತ್ತದೆ. ನನ್ನ ಲಕ್ಷ್ಯಕ್ಕೆ ಬಂದಹಾಗೆ ಅಲ್ಲಲ್ಲಿ ಸಾಗುವಳಿ ಆಗಿದೆ. ಅದನ್ನು ಬಡವರಿಗೆ ಕೊಡುವ ಸಂದರ್ಭದಲ್ಲಿ ಸಂಬಂಧಪಟ್ಟ ಖಾತೆಗಳಿಗೆ ಹೇಳಿ ರಿಲೀಜ್ ಮಾಡಿಸಲಾಗುತ್ತದೆ.

SRI A. R. BADRINARAYAN:—The Deputy Commissionerand Tahasildar say that it is beyond the terms of reference of this Committee to recommend such cases. ಅದಕ್ಕೇನು ಹೇಳುತ್ತೀರಿ?

ಶ್ರೀ ಎಚ್. ವಿ. ಕೌಜಲಗಿ:—ಅಂತಹವರಿಗೆ ಸ್ಪಷ್ಟವಾಗಿ ತಿಳಿಸುತ್ತೇವೆ.

BUILDING FOR L. F. DISPENSARY, VARTHUR.

325. SRI K. PRABHAKAR (Varthur):—

Will the Minister for Health be pleased to state:—

(*a*) the reason for not yet making available the newly constructed building for the use of L. F. Dispensary at Varthur;

(*b*) the cost of its construction and from which departmental funds it was built;

(*c*) when was the work order given and the number of times its estimate was revised and why?

SRI Y. RAMAKRISHNA (Minister for Health):—

(*a*) The building has been completed. The L. F. dispensary which was functioning in the rented building has been shifted to the new building on 19th August 1970.

(*b*) Rs. 16,000. The funds were made available from the following sources:—

			Rs.
1.	State Funds	...	4,666-67
2.	Taluk Development Board quota Bangalore South Taluk	... ...	4,833-33
3.	Varthur Village Panchayat	...	4,000-00
4.	Local efforts (Donation etc.)	...	2,500-00
			16,000-00

(*c*) The work was administratively sanctioned by the Deputy Commissioner, Bangalore, under the local Development Scheme during 1958-59 and it was taken up for execution in the year 1962. As per the desire of the Village Panchayat to have RCC roofing instead of tiled roofing, the estimate was revised once from Rs. 10,000 to Rs. 16,000.

ಶ್ರೀ ಕೆ ಪ್ರಭಾಕರ್:—ಈಗ ೧೬ಸಾವಿರ ರೂಪಾಯಿಗಳನ್ನು ನಾಲ್ಕು ಇಲಾಖೆಗಳಿಂದ ಒದಗಿಸಿದ್ದಿ ರೆಂದು ಉತ್ತರ ಕೊಟ್ಟಿದ್ದೀರಿ. ಈ ೧೬ಸಾವಿರ ರೂಪಾಯಿಗಳು ಕಟ್ಟಡ ಕಟ್ಟಿದವರಿಗೆ ಬಿಲ್ ರೂಪದಲ್ಲಿ ತಲುಪಿದೆಯೇ?